ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ಐದು ಸಾರಿ ಸಭೆ ನಡೆಸಿದ್ದಾರೆ

ಆ) ಈ ಸಭೆಯಲ್ಲಿ ಗಡಿ ವಿವಾದವನ್ನು ಬಗೆಹರಿಸುವ ವಿಷಯ ಮುಖ್ಯ ವಸ್ತುವಾಗಿರದೇ ಎರಡೂ ರಾಜ್ಯಗಳ ಗಡಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಭಾಷಾ ಅಲ್ಪಸಂಖ್ಯಾತರಿಗೆ ಶೈಕ್ಷಣಿಕ ಮಂತ್ತು ಅಭಿವೃದ್ಧಿ ಕ್ಷೇತ್ರಗಳಲ್ಲಿ ಹಾಗೂ ಆಡಳಿತದಲ್ಲಿ ವ್ಯವಹರಿಸುವಾಗ ಉಂಟಾಗಿರುವ ತೊಂದರೆಗಳನ್ನು ಅಭ್ಯಸಿಸಿ, ಅವುಗಳನ್ನು ನಿವಾರಿಸುವುದು ಪ್ರಧಾನ ವಸ್ತುವಾಗಿತ್ತು. ಆದರೂ ಪ್ರಾಸಂಗಿಕವಾಗಿ ದಿನಾಂಕ ೨೯-೯-೮೬ರಂದು ಗಡಿ ಪ್ರದೇಶಗಳ ಭವಿಷ್ಯದ ಬಗ್ಗೆ ಚರ್ಚೆ ನಡೆಸಲಾಗಿದ್ದು, ಮಾತುಕತೆಗಳಂ ನಡೆದ ವಾತಾವರಣ ಮತ್ತು ಸೌಹಾರ್ದಮನೋಭಾವಗಳು ಪರಸ್ಪರರಿಗೆ ಒಮ್ಮತವಾಗುವ ಸೂತ್ರವನ್ನು ಕಂಡುಹಿಡಿಯುವಲ್ಲಿ ಸಹಕಾರಿಯಾಗುವುದೆಂದು ಭಾವಿಸಲಾಯಿತು.

ಇ) ಕರ್ನಾಟಕ ರಾಜ್ಯದಲ್ಲಿ ಗಡಿವಿವಾದದ ಬಗ್ಗೆ ನಡೆದಿರುವ ಪ್ರದರ್ಶನಗಳಿಂದ ಸುಮಾರು ೪೭,೧೩,೯೮೦ರೂಗಳಷ್ಟು ಆಸ್ತಿಪಾಸ್ತಿಗಳ ನಷ್ಟ ಉಂಟಾಗಿರುತ್ತದೆ.

ಈ) ೭ ಜನರು ಮಡಿದಿದ್ದು ಅವರುಗಳ ಹೆಸರುಗಳು ಮತ್ತು ನೀಡಿದ ಪರಿಹಾರ ಈ ಕೆಳಗಿನಂತಿವೆ–

೧	ಭಾನಮ್ಮ ಮೊನಪ್ಪಕದಂ	ರೂ.	೭,೫೦೦-೦೦
೨	ಘನಶಾನಮ ಯಲ್ಲಪ್ಪ ಲಾಲಗೆ	ರೂ.	೭,೫೦೦-೦೦
೩	ಮೋಹನ ಲಕ್ಷ್ಮಣ ಪಾಟೀಲ್	ರೂ.	೭,೫೦೦-೦೦
೪	ಕಲ್ಲಪ್ಪ ಉಚಗಾಂವಕರ್	ರೂ.	೨೦,೦೦೦-೦೦
೫	ಬಾಹುಖಾನ್ ಮಿಂಗೂ ಚವ್ವಾನ್	ರೂ.	೨೦,೦೦೦-೦೦
೬	ಮಾರುತಿ ಮಹಾದೇವಗೌಡ	ರೂ.	೨೦,೦೦೦-೦೦
೭	ಶಂಕರಕನೂನ್ ಖಾನ್	ರೂ.	೨೦,೦೦೦-೦೦

ಅಬಕಾರಿ ಅಧೀಕ್ಷಕರುಗಳನ್ನು ವರ್ಗಾವಣೆ ಮಾಡದೇ ಇರುವ ಬಗ್ಗೆ

೫೭೨. ಶ್ರೀ ಐ.ಬಿ.ಶಂಕರ್ (ಚಿಕ್ಕಮಂಗಳೂರು)—ಮಾನ್ಯ ಆರೋಗ್ಯ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಲವು ಅಬಕಾರಿ ಅಧೀಕ್ಷಕರುಗಳು ನಿರಂತರವಾಗಿ ಒಂದೇ ಜಿಲ್ಲೆಯಲ್ಲಿ ಕೆಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಹಾಗೂ ಕೆಲವರು ನಿರಂತರವಾಗಿ ಬ್ರೂವರಿ ಮತ್ತು ಡಿಸ್ಟಿಲರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತಹ ಪ್ರಸಂಗಗಳು ಎಷ್ಟು ಮತ್ತು ಇಂತಹ ನೇಮಕದ ಬಗ್ಗೆ ಅನುಸರಿಸುತ್ತಿರುವ ನಿಯಮಗಳೇನು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಸಚಿವರು).—

ಅ) ಹೌದು. ನಾಲ್ಕು ವರ್ಷಗಳಿಗೆ ಮೇಲ್ಪಟ್ಟು ಮೂವರು ಅಬಕಾರಿ ಅಧೀಕ್ಷಕರುಗಳು ಒಂದೇ ಜಿಲ್ಲೆಯಲ್ಲಿನ ವಿವಿಧ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಆ) ಮೂರು. ಸರ್ಕಾರಿ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್. ೯ – ಎಸ್‌ಟಿಆರ್ ೮೪, ದಿನಾಂಕ. ೫-೯-೮೫ರಲ್ಲಿ ಹೊರಡಿಸಲಾದ ಸೂಚನೆಗಳನ್ನು ಅನುಸರಿಸಲಾಗುತ್ತಿದೆ.

ಕುಷ್ಠರೋಗ ಕಾರ್ಯ ವ್ಯವಸ್ಥಾಪಕ ಸಮಿತಿ ಬಗ್ಗೆ

೬೫೩. ಶ್ರೀ ಎಸ್. ಕೆ ಕಾಂತ (ಗಂಬ್ಟಿ)—ಮಾನ್ಯ ಆರೋಗ್ಯ ಮತ್ತು ಆಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೩ ವರ್ಷಗಳ ಹಿಂದೆ ರಚಿಸಲಾದ ಕುಷ್ಠರೋಗ ಕಾರ್ಯ ವ್ಯವಸ್ಥಾಪಕ ಸಮಿತಿಯು ಕಾರ್ಯ ನಿರ್ವಹಿಸುತ್ತಿದೆಯೇ ?

ಅ) ಹಾಗಿದ್ದಲ್ಲಿ ಸಮಿತಿಯು ಎಷ್ಟು ಬಾರಿ ಸಭೆ ಸೇರಿದೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು)

ಅ) ಈ ಸಮಿತಿಯನ್ನು ೧೯೮೬ರಲ್ಲಿ ಪುನರ್ರಚಿಸಲಾಗಿದೆ.

ಆ) ಸಭೆ ಸೇರಿಲ್ಲ

ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯ ನಿಂತು ಹೋಗಿರುವ ಬಗ್ಗೆ.

೮೮೯. ಶ್ರೀ ಹೆಚ್ ಬಿ.ದ್ಯಾವರಪ್ಪ(ಮಾಲೂರು)ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭ನೇ ಸಾಲಿನ ಆಯುವ್ಯಯ ಪಟ್ಟಿಯಲ್ಲಿ ಮಾಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ನಿರ್ಮಾಣವನ್ನು ಸೇರಿಸಿದೆಯೇ ? ಹಾಗಿದ್ದಲ್ಲಿ ಕಂಟ್ರಾಕ್ಟರಿಗೆ ಕೆಲಸವನ್ನು ಕೈಗೆತ್ತಿಕೊಳ್ಳಲು ಒಪ್ಪಿಸಲಾಗಿದೆಯೇ?

ಆ) ಈ ಕೆಲಸವು ಆರು ತಿಂಗಳಿಂದಲೂ ನಿಂತು ಹೋಗಿರುವುದು ನಿಜವೇ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಕಾರ್ಯಕ್ರಮದ ಪ್ರಕಾರ ಕೆಲಸವನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬ್ಕಾರಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ರಾಜ್ಯಾದ್ಯಂತದಲ್ಲಿ ನಡೆದ ಕೋಮು ಗಲಭೆಗಳ ಬಗ್ಗೆ

೪೩೫. ಶ್ರೀ ಎ ಎಂ.ಹಿಂಡಸಗಿರಿ(ಹಂಬ್ಬಳ್ಳಿ)—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬ರ ಜನವರಿಯಿಂದ ಡಿಸೆಂಬರ್ ಅಂತ್ಯದವರೆಗೆ ರಾಜ್ಯಾದ್ಯಂತದಲ್ಲಿ ನಡೆದ ಕೋಮು ಗಲಭೆಗಳ ಸಂಖ್ಯೆ ಎಷ್ಟು ?

ಆ) ೧೯೮೬ರಿಂದ ಡಿಸೆಂಬರ್ ಅಂತ್ಯದವರೆಗೆ ನಡೆದ ಪೋಲೀಸು ಗೋಲೀಬಾರ್ ಸಂಖ್ಯೆ ಎಷ್ಟು?

ಇ) ೧೯೮೬ರಿಂದ ಡಿಸೆಂಬರ್ ಅಂತ್ಯದವರೆಗೆ ನಡೆದ ಪೋಲೀಸ್ ಗೋಲೀಬಾರ್‌ನಲ್ಲಿ ರಾಜ್ಯದಲ್ಲಿ ಸತ್ತವರ ಸಂಖ್ಯೆ ಎಷ್ಟು ? ಜಾತಿವಾರು ತಿಳಿಸಿ.

ಶ್ರೀ ಬಿ ರಾಚಯ್ಯ (ಗೃಹ ಸಚಿವರು).—

ಅ) ೧೯೮೬ರಿಂದ ಡಿಸೆಂಬರ್‌ವರೆಗೆ ರಾಜ್ಯದಲ್ಲಿ ೩ ಪ್ರಧಾನ, ೧೬ ಸಣ್ಣ ಹಾಗೂ ೫೨ ಕೋಮು ಸ್ವರೂಪ ಗಲಭೆಗಳು ಉಂಟಾಗಿವೆ.

ಆ) ೩೦

ಇ) ಹಿಂದೂ ೧೧, ಮುಸಲ್ಮಾನ್ ೧೯